ಮೂಲ ದಾವಾ ಃ 142-2016 ಪಿಡಬ್ಲು-1

ಸಾಕ್ಷಿಯನ್ನು ದಿನಾಂಕಃ 06.02.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದ

ಸಂಪೂರ್ಣ ಹಣ ಕೊಟ್ಟರೆ ಮಾತ್ರ ಖರೀದಿ ಪತ್ರ ಆಗುತ್ತದೆ ಅಂದರೆ ಸರಿ. ನಾವು ಆಸ್ತಿ ಖರೀದಿ ಹಿಡಿದಾಗ ಮುಳಗುಂದರವರಿಗೆ ಸಂಪೂರ್ಣ ಖರೀದಿ ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಧರ್ಮೋಜಿರವರಿಗೆ ಸರ್ಕಾರದಿಂದ ಪ್ಲಾಟ್ ಮಂಜೂರಾಗಿತ್ತು ಅಂದರೆ ಗೊತ್ತಿಲ್ಲ. ಪ್ಲಾಟ್ ಮಂಜೂರಾದ ನಂತರ ಕಟ್ಟಡ ಕಟ್ಟುವಾಗ ನಾನು ತಕರಾರು ಕೊಟ್ಟಿದೆ ಅಂದರೆ ಸರಿ. ಈಗ್ಗೆ 2 ತಿಂಗಳ ಹಿಂದೆ ನಾನು ಧರ್ಮೋಜಿರವರ ವಿರುದ್ಧ ಕಲಘಟಗಿ ಠಾಣೆಯಲ್ಲಿ ದೂರು ಕೊಟ್ಟಿದ್ದೆ ಅಂದರೆ ಸರಿ. ಠಾಣೆಯಲ್ಲಿ ನಮ್ಮಿಬ್ಬರನ್ನು ಕರೆಸಿ ರಾಜಿ ಮಾಡಿ ಕಳುಹಿಸಿದ್ದರು ಅಂದರೆ ಸರಿ. ಸಾಕ್ಷಿ ಮುಂದುವರೆದು ಜಗಳದ ಬಗ್ಗೆ ರಾಜಿ ಮಾಡಿದ್ದರು ಅಂತ ನುಡಿಯುತ್ತಾರೆ. ನಾನು ಪ್ರತಿವಾದಿಗೆ ತಕರಾರು ಮಾಡಬಾರದೆಂದು ತಾಕಿತ್ತು ಮಾಡಿ ಕಳುಹಿಸಿದ್ದರು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಮಗೆ ತಕರಾರು ಇದ್ದರೇ ಅರ್ಜಿ ಕೊಡಬಹುದು ಅಂತ ಹೇಳಿದ್ದರು ಅಂತ ನುಡಿಯುತ್ತಾರೆ. ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟಿದ್ದೇನೆ. ಯಾರು ಪಂಚಾಯಿತಿಗೆ ಅರ್ಜಿ ಕೊಡಲು ಹೇಳಿರಲಿಲ್ಲ ನಾನೇ ಸ್ವತಃ ಕೊಟ್ಟಿದ್ದೇನೆ. ಈಗ್ಗೆ 2 ರಿಂದ 3 ದಿವಸದ ಹಿಂದೆ ಹಿರಿಯರು ನಮ್ಮ ಊರಿನಲ್ಲಿ ಕೂಡಿದ್ದರು ಅಂದರೆ ಸರಿಯಲ್ಲ. ನಾವು, ಪ್ರತಿವಾದಿಯರು ಹಾಗೂ ಊರಿನ ಹಿರಿಯರು ಸೇರಿ ಜಾಗವನ್ನು ಅಳತೆ ಮಾಡಿದ್ದೇವು ಅಂದರೆ ಸರಿಯಲ್ಲ. ಹಿರಿಯರು ಕೂಡಿದ್ದ ವಿಚಾರ ಗೊತ್ತಿದ್ದರು ಈಗ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಳತೆ ಮಾಡಿ ನಮಗೆ ತಿಳುವಳಿಕೆ ನೀಡಿದ್ದರು ಅಂದರೆ ಸರಿಯಲ್ಲ. ಅವರು ಕೂಡಿದ್ದಾಗ ನ್ಯಾಯಾಲಯದಲ್ಲಿ ಕೇಸು ಇರುವ ಬಗ್ಗೆ ನಾನು ಹಿರಿಯರಿಗೆ ತಿಳಿಸಿದ್ದೆ ಅಂದರೆ ಸರಿಯಲ್ಲ. ವಾದಿಯರು ಯಾವುದೇ ತಕರಾರು ಮಾಡಿರದಿದ್ದರೂ ಸುಳ್ಳು ದಾವೆ ಹಾಕಿದ್ದೇನೆ ಅಂದರೆ ಸರಿಯಲ್ಲ.

ನಮ್ಮ ಮನೆಯ ನಂ 35 ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 81 ಅಂತ ದಾಖಲಾಗಿದೆ ಅಂತ ನುಡಿಯುತ್ತಾರೆ. ನನ್ನ ಖರೀದಿ ಪತ್ರದ ಪ್ರಕಾರ ಆಸ್ತಿ ನಂ 35 ಅಂತ ಇದ್ದರು ಸಹ ಅರ್ಜಿ ಕೊಟ್ಟು ಖೊಟ್ಟಿ ದಾಖಲೆಗಳ ಆಧಾರದ ಮೇಲೆ 81 ಅಂತ ಸುಳ್ಳು ನಮೂದಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಸರ್ಕಾರದಿಂದ ಮಂಜೂರು ಪಡೆದು ಪ್ಲಾಟ್‌ನಲ್ಲಿ ಕಟ್ಟಡ ಕಟ್ಟುವಾಗ ನಾನು ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಹೂಡಿದ್ದೇನೆ ಅಂದರೆ ಸರಿಯಲ್ಲ. ಈ ಹಿಂದೆ ನನ್ನ ಪರವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದ ಬೂದಪ್ಪ, ವೀರಪ್ಪರವರು ನನ್ನ ಮನೆಯ ಭಾಜುಗೆ ಇರುವವರು. ಅವರುಗಳ ಮನೆ ನಮ್ಮ ಮನೆಯಿಂದ 20-30 ಮನೆಗಳ ನಂತರ ಇವೆ. ಅವರ ಇಬ್ಬರ ಮನೆಗಳು ನಮ್ಮ ಮನೆಯ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇದೆ. ನಮ್ಮ ಮನೆಯ ಮುಂದಿನ ಬಾಗಿಲು ದಕ್ಷಿಣದ ದಿಕ್ಕಿಗೆ ಇದೆ. ಪ್ರತಿವಾದಿಯರು ನಮಗೆ ಯಾವುದೇ ತೊಂದರೆ ಕೊಡದಿದ್ದರು ಸುಳ್ಳು ದಾವೆ ಹಾಕಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ 11 ಮತ್ತು 12 ರವರ ಮನೆಗಳು ನಮ್ಮ ಮನೆಯ ನಂತರ ಇವೆ ಅಂದರೆ ಸರಿ. ಅವರುಗಳ ಮನೆ ಈಗ ಕೀಲಿ ಹಾಕಿದ ಮನೆ ಅಂದರೆ ಸರಿ. ನಾವು ಅಲ್ಲಿ ಈಗ ಕಟ್ಟಿಗೆ ಇಡುತ್ತೇವೆ ಅಂದರೆ ಸರಿಯಲ್ಲ. ನಾನು ಪ್ರತಿವಾದಿ 11 ಮತ್ತು 12 ರವರ ಮಾತುಕೇಳಿ ಸುಳ್ಳು ದಾವೆ ಹಾಕಿ ಪ್ರತಿವಾದಿ 1 ರಿಂದ 10 ರವರಿಗೆ ತೊಂದರೆ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ